ಇಂದು ದಿನಾಂಕಃ 10.09.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ** ಪ್ರತಿವಾದಿಯ ಪರ ಶ್ರೀ. ಪಿ.ವಿ.ಕೆ. ವಕೀಲರಿಂದಃ

1. ಸರ್ವೇ ನಂಬರಃ 104 ಒಟ್ಟು ಎಷ್ಟು ಇದೆ ಎಂದು ನನಗೆ ಗೊತ್ತಿಲ್ಲ. ಸದರಿ ಆಸ್ತಿಯಲ್ಲಿ ಎಷ್ಟು ಭಾಗಗಳಾಗಿವೆ ಎಂದು ನನಗೆ ಗೊತ್ತಿಲ್ಲ. ಸರ್ವೇ ನಂಬರಃ 104ರ ಚೆಕ್ಕಬಂದಿ ನನಗೆ ಗೊತ್ತಿಲ್ಲ. ಸರ್ವೇ ನಂಬರಃ 104/5ಅ ನೇದ್ದರ ಚಕ್ಕಬಂದಿ ನನಗೆ ಗೊತ್ತಿಲ್ಲ. ನಾನು ಸಾಗು ಮಾಡುತ್ತಿದ್ದ ಜಮೀನಿನಲ್ಲಿ ತುಂಗಾ ಮೇಲ್ದಂಡೆ ಕಾಲುವೆ ಹಾದು ಹ ಹೋಗಿರುವುದಿಲ್ಲ. ನಾನು ಖರೀದಿ ಕಾಲಕ್ಕೆ ಪಹಣಿ ಪತ್ರ, ಕೆಡಿಟಿ, ಮ್ಯುಟೇಶನ್ ಮತ್ತು ಇನ್ನುಳಿದ ದಾಖಲೆಗಳನ್ನು ನೋಡಿ ಖರೀದಿಸಿರುತ್ತೇನೆ. ಪ್ರತಿವಾದಿಯ ಪರ ವಕೀಲರು ಸಾಕ್ಷಿಗೆ ಒಂದು ದಾಖಲೆಯನ್ನು ಎದುರು ತೋರಿಸಿ, ಅದರಲ್ಲಿ 104/5ರ ಪೂರ್ವ ಭಾಗದ 3 ಎಕರೆ ಜಮೀನನ್ನು ಹನುಮಪ್ಪ ತಿಮ್ಮಪ್ಪ ಕಂಕಾಳಿರವರಿಗೆ ರೂ. 1,000/- ಖರೀದಿ ಕೊಟ್ಟಿರುತ್ತಾರೆ ಎಂದು ಇದೆ ಎಂದರೆ ಸಾಕ್ಷಿಯು ನನಗೆ ಅದರ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಅದೇ ರೀತಿ ಪ್ರತಿವಾದಿಯ ಪರ ವಕೀಲರು ಸಾಕ್ಷಿಗೆ ಒಂದು ದಾಖಲೆಯನ್ನು ಎದುರು ತೋರಿಸಿ, ಅದರಲ್ಲಿ 104/5ಬ ನೇದ್ದರ ಪಹಣಿ ಪತ್ರಿಕೆ ಇದ್ದು, ಸಾಕ್ಷಿಯು ಅದನ್ನು ನೋಡಿ ಒಪ್ಪಿಕೊಂಡಿರುವುದಿಲ್ಲ. ಅದೇ ರೀತಿ ಪ್ರತಿವಾದಿಯ ಪರ ವಕೀಲರು ಸಾಕ್ಷಿಗೆ ಒಂದು ದಾಖಲೆಯನ್ನು ಎದುರು ತೋರಿಸಿ, ಅದು ಕರ್ನಾಟಕ ವಿದ್ಯುತ್‌ಛಕ್ತಿ ಮಂಡಳಿಯವರು ಕೊಟ್ಟ ಮಾಹಿತಿ ಇದ್ದು, ಅದು ಸರ್ವೇ ನಂಬರಃ 104/5ಬ ನೇದ್ದಕ್ಕೆ ಸಂಬಂಧಿಸಿದ್ದು ಎಂದು ಹೇಳಿ, ಸಾಕ್ಷಿಯು ಅದನ್ನು ನೋಡಿ ಒಪ್ಪಿಕೊಂಡಿದ್ದು, ಅದನ್ನು ನಿಡಿ-4 ಎಂದು ಗುರುತಿಸಲಾಯಿತು. ಅದೇ ರೀತಿ ಪ್ರತಿವಾದಿಯ ಪರ ವಕೀಲರು ಸಾಕ್ಷಿಗೆ ಒಂದು ದಾಖಲೆಯನ್ನು ಎದುರು ತೋರಿಸಿ, ಅದು ಇಂಗಳಗೊಂದಿಯ ಸೊಸೈಟಿಯಿಂದ ಕೊಟ್ಟ ಡಿಕ್ಲೇರೇಶನ್ ಪ್ರತಿ ಇದು ಎಂದು ಹೇಳಿ, ಸಾಕ್ಷಿಯು ಅದನ್ನು ನೋಡಿ ಒಪ್ಪಿಕೊಂಡಿರುವುದಿಲ್ಲ.

2. ಕಳಸಪ್ಪರವರ ತಂದೆ ಬಸಪ್ಪ ಹುಲ್ಲತ್ತಿ. ಸರ್ವೇ ನಂಬರಃ 104 ಕಳಸಪ್ಪರವರಿಗೆ ಅವರ ತಂದೆಯಿಂದ ಬಂದಿರುತ್ತದೆ. ಕಳಸಪ್ಪರವರ ತಂದೆ ಬಸಪ್ಪ ಹಾಗೂ ಬಸಪ್ಪ ತಿಪ್ಪಣ್ಣ ರಟ್ಟೀಹಳ್ಳಿಯವರ ಮಧ್ಯೆ ಭೂ ನ್ಯಾಯ ಮಂಡಳಿತಲ್ಲಿ ಅದಿಭೋಗದ ಹಕ್ಕಿಗೆ ಸಂಬಂಧಿಸಿದಂತೆ ವ್ಯಾಜ್ಯ ಇತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ವ್ಯಾಜ್ಯದಲ್ಲಿ 104/5ಎ, 7 ಎಕರೆ 3 ಗುಂಟೆ ನೇದ್ದರ ಬಗ್ಗೆ ವ್ಯಾಜ್ಯ ಇತ್ತು ಎಂದರೆ ಮಾಹಿತಿ ಇಲ್ಲ. ನಮ್ಮ ಹಗೂ ಪ್ರತಿವಾದಿಯರ ಮಧ್ಯೆ ಹಲವಾರು ಕ್ರಿಮಿನಲ್ ಪ್ರಕರಣಗಳಿವೆ ಎಂದರೆ ಸಾಕ್ಷಿಯು ಎರಡು ಕ್ರಿಮಿನಲ್ ಪ್ರಕರಣಗಳಿವೆ ಎಂದು ನುಡಿಯುತ್ತಾರೆ.

3. ನಾನು ಜಮೀನು ಖರೀದಿಸುವ ಮೊದಲು 11 ಎ ಸ್ಕೇಚ್ ಮಾಡಿಸಿದ್ದು, ನಂತರ ತಹಶೀಲ್ದಾರವರು ಸ್ಥಾನಿಕ ಚವಕಾಸಿ ಮಾಡಿ ಸ್ಟೇ ಇರುತ್ತದೆ ಎಂದು ನುಡಿಯುತ್ತಾರೆ. ವಾದ ಪತ್ರದಲ್ಲಿ ನಾವು ದಾವಾ ಆಸ್ತಿ ಕಿಮ್ಮತ್ತು ರೂ. 7,65,000/- ಕಿಮ್ಮತ್ತು ಮಾಡಿರುತ್ತೇವೆ ಎಂದರೆ ಸರಿ. ಮಾಗಣಿಗೆ ಅನುಗುಣವಾಗಿ ಕೋರ್ಟ ಫೀ ಭರಾಯಿಸಿಲ್ಲ ಎಂದರೆ ಸಾಕ್ಷಿಯು ಕೋರ್ಟ್ ಫೀ ಕಟ್ಟಿದ ನಂತರ ದಾವೆ ಚಾಲ್ತಿಯಲ್ಲಿರುತ್ತದೆ ಎಂದು ನುಡಿಯುತ್ತಾರೆ. ನಾವೇ ದಾವಾ ಆಸ್ತಿಯ ಸ್ವಾಧೀನದಲ್ಲಿರುತ್ತೇವೆ. ಪ್ರತಿವಾದಿಯತ ತಕರಾರನ್ನು ತಿಳಿದುಕೊಂಡಿರುತ್ತೇನೆ.

(ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯಾವಕಾಶ ಕೋರಿದ್ದು, ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ
Sd/-

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ., ಸಂಚಾರಿ
ನ್ಯಾಯಪೀಠ ರಟ್ಟೀಹಳ್ಳಿ.